## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 773/2024

**ಸಾಕ್ಷಿಯನ್ನು ದಿಃ 10.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಜಮೀರ್ ಅಹಮದ್ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ಲೇಟ್ ಜಮಾಲ್ ಖಾನ್ | | |
| ವಯಸ್ಸು | 59 ವರ್ಷ | | |
| ಕೆಲಸ | ಪಿ.ಎಸ್.ಐ. ಹುಣಸೂರು ಪಟ್ಟಣ ಠಾಣೆ | | |
| ವಾಸಸ್ಥಳ | ಹುಣಸೂರು ಪಟ್ಟಣ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 13.08.2023 ರಿಂದ ಇಲ್ಲಿಯವರೆಗೆ ಹುಣಸೂರು ಪಟ್ಟಣ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 03.12.2023 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–7 ರವರಿಂದ ಸ್ವೀಕರಿಸಿ ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದು ವರಿಸಿರುತೆ್ೀನೆ. ದಿನಾಂಕಃ 04.12.2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಕೃತ್ಯ ನಡೆದ ಸ್ಥಳವನ್ನು ತೋರಿಸಲು ಚಾಸಾ–1 ರವರಾಗಲೀ ಪ್ರತ್ಯಕ್ಷ ಸಾಕ್ಷಿದಾರರಾಗಲೀ ಲಭ್ಯವಿರಲಿಲ್ಲ. ದಿನಾಂಕಃ 05.12.2023 ರಂದು ಚಾಸಾ–2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಸದರಿಯವರು ಕೃತ್ಯಕ್ಕೆ ಅನುಗುಣವಾಗಿ ಹೇಳಿಕೆ ನೀಡಿದ್ದಾರೆ. ದಿನಾಂಕಃ 06.12.2023 ರಂದು ಪುನಃ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿದಾಗ ಚಾಸಾ–1 ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಚಾಸಾ–4 ಮತ್ತು 5 ರವರಿಗೆ ಪಂಚರಾಗಿ ಸಹಕರಿಸಲು ಮೌಖಿಕವಾಗಿ ಕೋರಿಕೊಂಡ ಮೇರೆಗೆ ಅವರು ಒಪ್ಪಿದರು. ಚಾಸಾ–1 , 4 ಮತ್ತು 5 ರ ಸಮಕ್ಷಮ ಬೆಳಿಗ್ಗೆ 10.00 ರಿಂದ 11.00 ಗಂಟೆಗೆ ಸ್ಥಳ ಮಹಜರು ಕ್ರಮವನ್ನು ಜರುಗಿಸಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ–2 ಸಿ ಎಂದು ಗುರುತಿಸಲಾಯಿತು. ನಂತರ

ಆರೋಪಿತರು ನನ್ನ ಮುಂದೆ ಠಾಣೆಯಲ್ಲಿ ಹಾಜರಾದ ಮೇರೆಗೆ ಅವರಿಗೆ ನೋಟೀಸನ್ನು ಜಾರಿಗೊಳಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1ಮತ್ತು 2ನೇ ಆರೋಪಿತರನ್ನು ನೋಡಿ ಗುರುತಿಸಿದ್ದು , 3ನೇ ಆರೋಪಿ ಗೈರು ಹಾಜರಾಗಿದ್ದು , ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ. ದಿನಾಂಕಃ 07.03.2024 ರಂದು ಚಾಸಾ-1 ರವರ ಗಾಯಾದ ಪ್ರಮಾಣಪತ್ರವನ್ನು ಸ್ವೀಕರಿಸಿದ್ದು ಅದನ್ನು ಈಗ ನೋಡುತ್ತಿದ್ದು ನಿಪಿ-5 ಎಂದು , ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ಸಾಕಷ್ಟು ಪುರಾವೆ ಕಂಡು ಬಂದ ಕಾರಣ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಡಿ ಆರ್ ಎಂ ವಕೀಲರಿಂದಃ**

ಪ್ರಕರಣದ ಕಡತವನ್ನು ಪಡೆದುಕೊಳ್ಳುವಾಗ ಘಟನೆಯ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದೆ. ಚಾಸಾ-1 ರವರು ಚಾಸಾ-3 ರವರ ಕೈಯಲ್ಲಿ ಕಳುಹಿಸಿಕೊಟ್ಟಿದ್ದ ದೂರಿನ ಆಧಾರದ ಮೇರೆಗೆ ಪ್ರಕರಣ ದಾಖಲಿಸಲಾಗಿದೆ. ಚಾಸಾ-1 ರವರು ದೂರು ಕೊಟ್ಟಿಲ್ಲ ಎಂದರೆ ಅವರು ಬರೆಸಿಕೊಟ್ಟಂತಹ ದೂರನ್ನು ಚಾಸಾ-3 ರವರು ಹಾಜರುಪಡಿಸಿದ್ದಾರೆ. ದೂರಿನಲ್ಲಿ ಈ ಬಗ್ಗೆ ಬರೆಯಲಾಗಿದೆಯೇ ಎಂದರೆ ಬರೆದಿದೆ. ಚಾಸಾ-1 ರವರು ದೂರು ಕೊಟ್ಟಿಲ್ಲ ಎಂದರೆ ನಿಪಿ-1 ರ ದೂರನ್ನು ಚಾಸಾ-1 ರವರು ಚಾಸಾ-3 ರವರ ಮೂಲಕ ಕಳುಹಿಸಿ ಕೊಟ್ಟಿದ್ದಾರೆ. ನಾನು ತನಿಖೆ ಮಾಡುವ ಪೂರ್ವದಲ್ಲಿ ಪ್ರ.ವ.ವ. ವರದಿಯ ಬಗ್ಗೆ ತಿಳಿದುಕೊಂಡಿಲ್ಲ. ದಿನಾಂಕಃ 04.12.2023 ರಂದು ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳ ಜನ ದಟ್ಟಣೆ ಇರುವ ಪ್ರದೇಶ ಎಂದರೆ ಇಲ್ಲ. ದಿನಾಂಕಃ 05.12.2023 ರಂದು ಚಾಸಾ-2

ಮತ್ತು 3 ರವರ ಹೇಳಿಕೆ ಪಡೆದು ಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 06.12.2023 ರಂದು ಘಟನಾ ಸ್ಥಳಕ್ಕೆ ಹೋಗಿದ್ದೇನೆ ಮತ್ತು ಚಾಸಾ–1 ರವರು ಘಟನಾ ಸ್ಥಳವನ್ನು ತೋರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 06.12.2023 ರಂದು ಮಹಜರನ್ನು ಸ್ಥಳದಲ್ಲಿಯೇ ಬರೆದಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರ ಗಾಯಾದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರು ಮಾಡಿಲ್ಲ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡಬೇಕೆಂದು ಸುಳ್ಳು ದೂರಿನ ಆಧಾರದ ಮೇಲೆ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.